**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5050/2021**

**ಸಿ.ಡಬ್ಲ್ಯೂಃ– 2 ಪಿ.ಡಬ್ಲ್ಯೂಃ– 2**

**ದಿಃ 05.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಪ್ರಸಾದ ವಿಜಯ ಭರವೆ |
| ವಯಸ್ಸು | : | 40 ವರ್ಷ. |
| ಉದ್ಯೋಗ | : | ಹೊಟೇಲ ವ್ಯಾಪಾರ |
| ವಾಸಸ್ಥಳ | : | ನಿಪ್ಪಾಣಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.3 ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಗೊತ್ತಿಲ್ಲ. ಸುಮಾರು 5 ವರ್ಷಗಳ ಹಿಂದೆ ನಾನು ನನ್ನ ಹೊಟೇಲನಲ್ಲಿದ್ದಾಗ ಪೋಲಿಸರು ನಮ್ಮ ಹೊಟೇಲಗೆ ಬಂದು ನನ್ನನ್ನು ಸ್ಥವನಿಧಿ ಘಾಟಕ್ಕೆ ಕರೆದುಕೊಂಡು ಹೋಗಿ ಛಾಯಾಚಿತ್ರಗಳನ್ನು ತೆಗೆದು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ನಿ.ಪಿ.2 ರ ಛಾಯಾಚಿತ್ರದಲ್ಲಿ ನಾನಿದ್ದೇನೆ. ನನ್ನ ಪಕ್ಕದಲ್ಲಿರುವ ವ್ಯಕ್ತಿ ಚಾ.ಸಾ.3 ರವರಾಗಿರುತ್ತಾರೆ. ಉಳಿದ ವ್ಯಕ್ತಿಗಳು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಈ ದಿನ ನ್ಯಾಯಾಲಯದ ಮುಂದೆ ಇಲ್ಲ. ನನ್ನ ಮುಂದೆ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಲ್ಲ. ನನಗೆ ಪಂಚನಾಮೆಯನ್ನು ಓದಿ ಹೇಳಿಲ್ಲ, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಕೋರಿದ್ದಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ದಿನಾಂಕಃ 04.03.2020 ರಂದು ಪೋಲಿಸರು ನನ್ನನ್ನು ಮತ್ತು ಚಾ.ಸಾ.3 ರವರನ್ನು ನಿಪ್ಪಾಣಿಯ ರಾ.ಹೆ.ಯಲ್ಲಿರುವ ಗವಾನಿ ಕ್ರಾಸ ಹತ್ತಿರ ನಮ್ಮನ್ನು ಕರೆದುಕೊಂಡು ಹೋಗಿ ನಮಗೆ ಮಾಹಿತಿ ನೀಡಿ ಆರೋಪಿಗಳು ಮಾರಕ ಆಯುಧಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಬರುವ ವಾಹನಗಳನ್ನು ಅಡ್ಡಗಟ್ಟಿದರೋಡೆ ಮಾಡಲು ಹೊಂಚು ಹಾಕುತ್ತಿರುವುದಾಗಿ ತಿಳಿಸಿ ನಂತರ ಆರೋಪಿಗಳನ್ನು ಸುತುತವರಿದು ಹಿಡಿದುಕೊಂಡು ಅವರ ಬಳಿ ಇದ್ದ ವಸ್ತುಗಳನ್ನು ಪರಿಶೀಲಿಸಿದಾಗ 1ನೇ ಆರೋಪಿ ಮಹಾರಾಷ್ಟ್ರ ರಾಜ್ಯದ ಪೋಲಿಸ ವೇಷ ಧರಿಸಿದ್ದು, ಬೂಟುಗಳು, ಪೋಲಿಸ ಬೆಲ್ಟ್ , ನಕಲಿ ಎರ್ ಪಿಸ್ತೂಲ, ವಾಕಿಟಾಕಿ, ಅಬಕಾರಿ ಇಲಾಖೆ ಎಂದು ನಮೂದು ಮಾಡಿದ ನಕಲಿ ಗುರುತಿನ ಚೀಟಿ ಇದ್ದವು. 2ನೇ ಆರೋಪಿಯ ಬಳಿ ಒಂದು ಮೋಟಾರಸೈಕಲ, ಒಂದು ಕಬ್ಬಿಣದ ಚಾಕು, 3ನೇ ಆರೋಪಿಯ ಬಳಿ ಒಂದು ಮೋಟಾರಸೈಕಲ, ಒಂದು ಚಾಕು, ಒಂದು ಟಾರ್ಚ, 4ನೇ ಆರೋಪಿ ಬಳಿಯಿಂದ ಒಂದು ಬಿದಿರು ಬಡಿಗೆ, ಖಾರದ ಪುಡಿ, ಒಂದು ವಾಕಿಟಾಕಿ ಇದ್ದವು. 5ನೇ ಆರೋಪಿಯ ಬಳಿ ಒಂದು ಬಿದಿರು ಬಡಿಗೆ, ಒಂದು ಹಗ್ಗ ಸಿಕ್ಕಿದ್ದು, ಮೇಲ್ಕಂಡ ಎಲ್ಲ ವಸ್ತುಗಳನ್ನು ರಾತ್ರಿ 09.40 ರಿಂದ 11 ಗಂಟೆಯವರೆಗೆ ವಾಹನದ ಮತ್ತು ಟಾರ್ಚ ದೀಪದ ಬೆಳಕಿನಲ್ಲಿ ಪಂಚನಾಮೆ ಮಾಡಿ ಜಪ್ತಿಪಡಿಸಿರುತ್ತಾರೆ ಎಂದರೆ ಸುಳ್ಳು. ಆ ಕಾಲಕ್ಕೆ ನಿ.ಪಿ.2 ರಿಂದ 5 ರ ಛಾಯಾಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸುಳ್ಳು. 1 ಮತ್ತು 2ನೇ ಆರೋಪಿಗಳು ನಮ್ಮ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲ

ವಿಚಾರಗಳು ತಿಳಿದಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಆರೋಪಿತರ ಪರ:– ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾ.ಓ.ಹೆ.ಕೆ.ಸ.ಅ.)

(ವಿಜಯ ಕುಮಾರ)
7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕೋಡಿ.